ಎಂ.ವಿ.ಸಿ ನಂ.160/2025

ಪಿ.ಡಬ್ಲೂ-1

**ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀಸವಾಲುಃ- 2 ನೇ ಎದುರುದಾರ ಪರ ಶ್ರೀಮತಿ ಎಸ್.ಎ.ಎನ್ ವಕೀಲರಿಂದ ಃ**

1. ಅಪಘಾತವಾದಾಗ ನಾನು ಮೋಟರ ಸೈಕಲನಲ್ಲಿ ತೇಲಸಂಗದಿಂದ ಸಾವಳಗಿ ಗ್ರಾಮಕ್ಕೆ ಹೋಗುತ್ತಿದ್ದೇನು. ಆಗ ನಾನು ಮೋಟರ ಸೈಕಲ ಓಡಿಸುತ್ತಿದ್ದೇನು. ಅಪಘಾತ ಸ್ಥಳದಲ್ಲಿ ಗತಿರೋಧಕಗಳು ಇವೆ ಎಂದರೆ ಸರಿ. ಅಪಘಾತ ಮಧ್ಯಾಹ್ನ ಆಗಿತ್ತು ಎಂದರೆ ಸರಿ. ಅಪಘಾತವಾದಗ ಗತಿರೋಧಕ ಇದ್ದ ಕಾರಣ ನಾನು ಮೋಟರ ಸೈಕಲ ಬ್ರೆಕ್ ಹಾಕಿದೇನು ಎಂದರೆ ಸರಿ. ಆ ಕಾಲಕ್ಕೆ ನಾನು ಹೆಲ್ಮೆಟ್ಟ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಆಗ ನನಗೆ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿ. ಮೋಟರ ಸೈಕಲಗೆ ವಿಮೆ ಇರಲಿಲ್ಲ ಎಂದರೆ ಸರಿ. ನಾನು ಗತಿರೋಧಕ ಇರುವ ಕಾರಣ ಒಮ್ಮಿಂದೊಮ್ಮೆಲೇ ಬ್ರೆಕ್ ಹಾಕಿ ನಾನೇ ಅಪಘಾತ ಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೋಟರ ಸೈಕಲಗೆ ವಿಮೆ ಇಲ್ಲದೇ ಹಾಗೂ ನನಗೆ ಚಾಲನಾ ಪರವಾನಿಗೆ ಇಲ್ಲದ ಕಾರಣ ಪರಿಹಾರ ಪಡೆಯುವ ಉದ್ದೇಶದಿಂದ ಲಾರಿ ನಂ.ಎಂ.ಹೆಚ್-12 ಕ್ಯೂ.ಜಿ 7300 ವಿರುದ್ದ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

2. ಅಪಘಾತವಾದ ನಂತರ ನಾನು ಜಮಖಂಡಿಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದೆನು. ಅಪಘಾತದಲ್ಲಿ ನನ್ನ ತೆಲೆಗೆ ಮತ್ತು ಬಲಗಾಲಿಗೆ ಪೆಟ್ಟು ಆಗಿತ್ತು. ನನಗೆ ಯಾವುದೇ ಮೂಳೆ ಮುರಿತ ಆಗಿಲ್ಲ ಎಂದರೆ ಸರಿ. ನಂತರ ನಾನು ಹೆಚ್ಚಿನ ಚಿಕಿತ್ಸೆಗಾಗಿ ಮಿರಜ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದೆನು. ಜಮಖಂಡಿಯ ಖಾಸಗಿ ಆಸ್ಪತ್ರೆಯಲ್ಲಿ ಹಾಗೂ ಮಿರಜ ಖಾಸಗಿ ಆಸ್ಪತ್ರೆಗಳಲ್ಲಿ ಕೇವಲ ಹೋರರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ ನನಗೆ ಯಾವುದೇ ಅಪರೇಶನ ಆಗಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕಿತ್ಸೆಗೆ ಈಗಾಗಲೇ 5 ಲಕ್ಷ ಖರ್ಚಾಗಿದ್ದು ಇನ್ನು ಹೆಚ್ಚಿನ ಚಿಕಿತ್ಸೆಗಾಗಿ 1 ಲಕ್ಷ ಬೇಕು ಎಂದು ಯಾವುದೇ ದಾಖಲೆ ಹಾಜರಪಡಿಸಿಲ್ಲ ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಅಪಘಾತವಾದಗ ನನಗೆ 65 ವರ್ಷ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ನನಗೆ 55 ವರ್ಷವಯಸ್ಸು ಆಗಿತ್ತು ಎಂದು ತೋರಿಸುವ ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ಈಗ ನಾನು ಚಾಲನಾ ಪರವಾನಿಗೆ ಹೊಂದಿದ್ದೇನೆ. ಸದರಿ ಚಾಲನಾ ಪರವಾನಿಗೆ ನ್ಯಾಯಾಲಯಕ್ಕೆ ಹಾಜರಪಡಿಸುತ್ತೇನೆ. ನಾನು ಒಕ್ಕಲುತನದಿಂದ ವರ್ಷಕ್ಕೆ 4 ಲಕ್ಷ ಸಂಪಾದಿಸುತ್ತೇನೆ ಎಂದು ತೋರಿಸುವ ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿ. ನಾನು ಈಗ ಮೊದಲಿನಂತೆ ಚೆನ್ನಾಗಿ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ತಪ್ಪಿನಿಂದ ಆಗಿದ್ದರು ಪರಿಹಾರ ಪಡೆಯಲು ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 2 ಎದುರುದಾರ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಜಮಖಂಡಿ